People' Union for Civil Liberties - Karnataka
No. 46, Wellington street, Richmond Town, Bangalore - 560 025
Bangalore@PUCLKarnataka.org | http://puclkarnataka.org | 080-222-11109

ದಿನಾಂಕ: **25.12.2010**

ಪತ್ರಿಕಾ ಪ್ರಕಟಣೆಗಾಗಿ

ಮಾನವ ಹಕ್ಕುಗಳ ಕಾರ್ಯಕರ್ತ ಛತ್ತಿಸ್‌ಘಡದ ನಿರ್ದೋಷಿ ಮುಗ್ದ ಡಾ. ಬಿನಾಯಕ್ ಸೆನ್‌ರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಛತ್ತೀಸ್ ಘಡ ಸರಕಾರ ಮತ್ತು ಅದರ ಪ್ರಯೋಜಿತ ಖಾಸಗಿ ಪಡೆ ಸೆಲ್ವಾಜೂಡುಂ ವೈರತ್ವಕ್ಕೆ ಬಿನಾಯಕ್ ಸೆನ್ ಬಲಿಯಾಗಿರುವುದು ದುರಧೃಷ್ಟಕರ ಸಂಗತಿ. ರಾಜ್ಯ ಸರಕಾರದ ಇಂತಹ ಕೃತ್ಯವನ್ನು ದೇಶದ ಸರ್ವೋಚ್ಚ ನ್ಯಾಯಾಲಯವೇ ಖಂಡಿಸಿ ಎಚ್ಚರಿಕೆ ನೀಡಿದ್ದರೂ ಛತ್ತೀಘಡ ನ್ಯಾಯಾಲಯವನ್ನು ದಾರಿತಪ್ಪಿಸಿವೆ. ಸುಳ್ಳುಸಾಕ್ಷ್ಯ ಸೃಷ್ಟಿಸಿ ಒಬ್ಬ ಮಾನವ ಹಕ್ಕುಗಳ ರಕ್ಷಕ ಮುಗ್ದ ಬಿನಾನಾಯಕ್ ಸೆನ್‌ರನ್ನು ಜೀವಾವಧಿ ಶಿಕ್ಷೆಗೆ ಗುರಿಯಾಗುವಂತೆ ಮಾಡಿರುವುದು ಛತ್ತೀಸ್‌ಘಡ ಸರಕಾರ ನಿರಂತರವಾಗಿ ಅಮಾಯಕರ ಮೇಲೆ ನಡೆಸುತ್ತಿರುವ ಸೇಡಿನ ಪ್ರಕರಣಗಳಿಗೆ ಮತ್ತೊಂದು ಸೇರ್ಪಡೆ ಇದಾಗಿದೆ.

ಈ ದೇಶದ ಅಪರಾಧ ನಿಯತ್ರಂಣ ಕುರಿತ ಕಾನೂನುಗಳಿಗೆ ಆಮೂಲಾಗ್ರ ಬದಲಾವಣೆ ತರುವ ಅಗತ್ಯ ಬಂದೊದಗಿದೆ. ಅಲ್ಲದೇ ಕಾನೂನನ್ನು ಸರಕಾರ ಮತ್ತು ಪೊಲೀಸ್ ವ್ಯವಸ್ಥೆ ತನ್ನ ರಾಜಕೀಯ ಅಗತ್ಯಕ್ಕೆ ತಕ್ಕಂತೆ ತಿರುಚಿ ತಾತ್ವಿಕ ನೆಲೆಯಲ್ಲಿ ಸರಕಾರದ ತಪ್ಪುಗಳನ್ನು ಎತ್ತಿಹಿಡಿಯುವ ಸಾಮಾನ್ಯ ನಾಗರೀಕರಿಗೆ ಕಿರುಕುಳ ಕೊಡುವ, ಶಿಕ್ಷಿಸಿ ಬಲಿಪಶು ಮಾಡುವ ಸರಕಾರದ ಚಾಳಿಗೆ ನಿಯಂತ್ರಣ ಹಾಕುವಂತೆ ಎಲ್ಲಾ ನಾಗರೀಕರೂ ಒಟ್ಟಾಗಿ ಒತ್ತಾಯಿಸುವ ಸಂದರ್ಭ ಇದು.

ಈ ಮೂಲಕ ದ್ವೇಷ ಮತ್ತು ಜನವಿರೋಧಿ ಕೃತ್ಯಗಳಿಗೆ ದೇಶದ ಕಾನೂನಿನ ದುರ್ಬಳಕೆಯಾಗದಂತೆ ನೋಡಿಕೊಳ್ಳುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಅಗತ್ಯ ಎಲ್ಲಾ ಪ್ರಜ್ಞಾವಂತ ನಾಗರೀಕರ ಮೇಲಿದೆ. ಅವರೆಲ್ಲರ ಜೊತೆಗೂಡಿ ಪಿಯುಸಿಎಲ್ – ಕರ್ನಾಟಕ ತನ್ನ ಹೋರಾಟವನ್ನು ಮುಂದುರೆಸುತ್ತದೆ. ನ್ಯಾಯಾಲಯದ ತೀರ್ಪಿನ ಪ್ರತಿ ನಮ್ಮ ಕೈಸೆರಿದ ನಂತರ ಮುಂದಿನ ಕ್ರಮ ಕೈಗೊಳ್ಳಲಿದ್ದೇವೆ.

ತಮ್ಮ ಪತ್ರಿಕೆಯಲ್ಲಿ ವರದಿ ಮಾಡಬೇಕಾಗಿ ವಿನಂತಿ.

ಪಿಯುಸಿಎಲ್ – ಕರ್ನಾಟಕದ ಪರವಾಗಿ,
ವೈ ಜೆ ರಾಜೇಂದ್ರ, ಸಂಚಾಲಕ, ರಾಮ್ ಕುಮಾರ್, ಅಧ್ಯಕ್ಷ ಮತ್ತು ಆನಂದ ಬಾಲ, ಜಂಟಿ ಕಾರ್ಯದರ್ಶಿ, ಬೆಂಗಳೂರು ಶಾಖೆ